**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 33/2024**

**ದೋ.ಸಾ. : 1 ಫ್ರಾ.ಸಾ. : 1**

ಸಾಕ್ಷಿಯ ಹೆಸರು : ರಮೇಶ್ ನಾರಾಯಣ ನಾಯಕ
ತಂದೆಯ ಹೆಸರು : ನಾರಾಯಣ ನಾಯಕ
ವಯಸ್ಸು : 64 ವರ್ಷ
ಉದ್ಯೋಗ : ಕೃಷಿ
ವಾಸ : ಅಂಕೋಲಾ.

**ದಿನಾಂಕಃ 05–09–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಳೆದ 22–23 ವರ್ಷಗಳಿಂದ ಅಂಕೋಲಾದ ವಂದಿಗೆ ಗ್ರಾಮದಲ್ಲಿ ವಾಸ ಇದ್ದೇನೆ. ನನಗೆ ಬೆಳಸೇ ಗ್ರಾಮದಲ್ಲಿ ಸರ್ವೆನಂಬರ್ 140/2 ರಲ್ಲಿ 3 ಎಕರೆ 20 ಗುಂಟೆ ಜಮೀನು ಇದೆ. ನನ್ನ ಜಮೀನಿನ ಬಾಜು ದೇವಿದಾಸ್ ವಿಠೋಬಾ ನಾಯಕ ರವರ ಜಮೀನು ಸರ್ವೆನಂಬರ್ 140/1 ರಲ್ಲಿ ಇತ್ತು. ನನ್ನ ಜಮೀನಿಗೆ ಮತ್ತು ಮೇಲ್ಕಂಡ ಪಕ್ಕದ ಜಮೀನಿಗೆ ಪ್ರತ್ಯೇಕ ಬೇಲಿ ಇತ್ತು. ಆ ರೀತಿ ನನ್ನ ಮತ್ತು ಬಾಜುದಾರರ ಜಮೀನಿಗೆ ಪ್ರತ್ಯೇಕ ಸರ್ವೆ ನಂಬರ್ ಹಿಸ್ಸಾ ಇದ್ದದ್ದನ್ನು ಸರ್ವೆ ಇಲಾಖೆಯವರು ಬದಲಾಯಿಸಿ ನಮ್ಮ ಇಬ್ಬರ ಜಮೀನನ್ನು ಒಂದೇ ಸರ್ವೆ ನಂಬರ್ ನಲ್ಲಿ ಸೇರಿಸಿ ಇಬ್ಬರ ಜಮೀನಿಗೆ ಸರ್ವೆನಂಬರ್ 140 ಎಂದು ಸರ್ವೆ ನಂಬರ್ ನೀಡಿದರು ಮತ್ತು ಸರ್ವೆ ನಂಬರ್ 140 ರಲ್ಲಿ ಒಟ್ಟು ವಿಸ್ತೀರ್ಣವನ್ನು 7 ಎಕರೆ ಎಂದು ನಮೂದಿಸಿದರು. ಒಂದೇ ಪಹಣಿಯಲ್ಲಿ ಇಬ್ಬರ ಜಮೀನನ್ನು ಆ ರೀತಿ ನಮೂದಿಸಿದರು. ಆ ಬಗ್ಗೆ ನಾನು ಸರ್ವೆ ಇಲಾಖೆಗೆ ರೂ.4300/– ಅನ್ನು ಶುಲ್ಕವನ್ನು ತುಂಬಿ ದಿನಾಂಕ 26.04.2022 ರಂದು ಅರ್ಜಿ ಸಲ್ಲಿಸಿ ನನ್ನ ಜಮೀನನ್ನು ತತ್ಕಾಲ್ ಪೋಡಿ ಮಾಡಿಕೊಡುವಂತೆ ಕೋರಿದೆ. ನಾನು ಅರ್ಜಿ ಕೊಟ್ಟ ಮೇಲೆ ನನಗೆ ಸರ್ವೆ ಇಲಾಖೆಯಿಂದ ಒಂದು ಬಾರಿ ನೋಟಿಸು ಬಂತು . ನನಗೆ ಜಮೀನಿನ ಬಳಿ ಬರುವಂತೆ ಸೂಚಿಸಿದರು, ನಾನು ನನ್ನ ಜಮೀನಿನ ಬಳಿ ಹೋದೆ. ಅಲ್ಲಿಗೆ ಈಶ್ವರಯ್ಯ ಎಂಬ ಸರ್ವೆಯರ್ ಬಂದಿದ್ದರು, ಅದರ ದಿನಾಂಕ ನೆನಪಿಲ್ಲ. ಅವರು ಸರ್ವೆ ಮಾಡಲಿಲ್ಲ. ಆದರೆ ಜಮೀನಿನ ಬಳಿಗೆ ಪಕ್ಕದ ಜಮೀನುನವರಾದ ದೇವಿದಾಸ್ ವಿಠೋಬ ನಾಯಕ್ ರವರನ್ನು ಸದರಿ ಸರ್ವೇಯರ್ ರವರು ಕರೆಸಿದರು. ಆ ದಿನ ಸರ್ವೆಯರ್ ರವರು ಸರ್ವೆ ಮಾಡದೇ ವಾಪಸ್ಸು ಹೋದರು. ನಾನು ನಂತರ ಬಹಳ ಬಾರಿ ಅಂಕೋಲಾದ

ತಹಶೀಲ್ದಾರರವರ ಕಚೇರಿಯಲ್ಲಿ ಮಹಡಿ ಮೇಲೆ ಇರುವ ಸರ್ವೇಯರ್ ರವರ ಕಚೇರಿಗೆ ಹೋಗಿ ಅಲ್ಲಿ ವಿನೋದ ರಾಠೋಡ್ ಎಂಬ ಭೂಮಾಪಕ ಸಹಾಯಕ ನಿರ್ದೇಶಕರನ್ನು ಬೇಟಿ ಮಾಡಿರುತ್ತೇನೆ. ಆಗ ಅವರು ಮತ್ತೊಮ್ಮೆ ನೋಟಿಸು ಜಾರಿ ಮಾಡಿ ತಾನೇ ಸ್ವತಃ ಈಶ್ವರಯ್ಯ ಸರ್ವೇಯರ್ ರವರ ಜೊತೆ ಸರ್ವೆ ಮಾಡಲು ಜಮೀನಿಗೆ ಬರುವುದಾಗಿ ಹೇಳಿದರು. ನಂತರ 1 ಬಾರಿ ಅವರಿಬ್ಬರು ಜಮೀನಿನ ಬಳಿ ಬಂದರು ಆದರೆ ಸರ್ವೆ ಕಾರ್ಯ ಮಾಡದೇ ವಾಪಸ್ಸು ಹೋದರು. ನಂತರ ವಿನೋದ್ ರಾಠೋಡ್ ಭೂಮಾಪಕ ಸಹಾಯಕ ನಿರ್ದೇಶಕರನ್ನು ಅಲ್ಲಿಂದ ವರ್ಗಾವಣೆಯಾದರು. ನಂತರ ಅಲ್ಲಿಗೆ ನ್ಯಾಯಾಲಯದಲ್ಲಿರುವ ಆರೋಪಿ ಪುಟ್ಟಸ್ವಾಮಿ ರವರು ಭೂಮಾಪಕ ಸಹಾಯಕ ನಿರ್ದೇಶಕರು ಆಗಿ ಬಂದರು, ನಾನು ಅವರನ್ನು ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಾನು ಹೇಳಿದ ಭೂಮಾಪಕ ಸಹಾಯಕ ನಿರ್ದೇಶಕರಾದ ಪುಟಸ್ವಾಮಿ ಅವರು ಆಗಿರುತ್ತಾರೆ. ನಾನು ಆರೋಪಿಯನ್ನು ಅವರ ಕಚೇರಿಯಲ್ಲಿ ಬೇಟಿ ಮಾಡಿದೆ. ನಾನು ಬೇಟಿ ಮಾಡಿದಾಗ ಆರೋಪಿಯು ನನ್ನ ಜಮೀನಿನ ಸರ್ವೆ ಕೆಲಸವನ್ನು ಈಶ್ವರಯ್ಯ ಸರ್ವೆಯರ್ ರವರ ಮೂಲಕ ಮಾಡಿಸಿ ಕೊಡುವುದಾಗಿ ನನಗೆ ಹೇಳಿದರು. ಆರೋಪಿಯು ನನಗೆ ಸರ್ವೆ ಮಾಡಿಸಿಕೊಡಲು ರೂ.50000/- ಕೊಡುವಂತೆ ಕೇಳಿದರು. ಆಗ ನನಗೆ ಆ ರೀತಿ ಹಣ ಕೊಡಲು ಮನಸ್ಸು ಇಲ್ಲದೇ ಇದ್ದರೂ, ನನಗೆ ಓಡಾಡಲು ಆಗುವುದಿಲ್ಲ ಎಂಬ ಕಾರಣಕ್ಕೆ ಆ ದಿನ ರೂ.50000/- ಅನ್ನು ಆರೋಪಿಗೆ ನೀಡಿದೆ. ಅದರ ದಿನಾಂಕ 30.12.2022 ಇರಬಹುದು. ನಾನು ಆರೋಪಿಗೆ ರೂ.50000/- ಜಾಸ್ತಿಯಾಯಿತು ಎಂದು ಹೇಳಿದೆ, ಅದಕ್ಕೆ ಆರೋಪಿಯು ರೂ.10000/- ಕಡಿಮೆ ಕೊಡಿ, ರೂ.40000/- ಕೊಡಿ ಎಂದು ಕೇಳಿದರು. ಅದು ಸರ್ಕಾರಿ ಶುಲ್ಕದ ಹಣ ಅಲ್ಲ, ಸರ್ಕಾರಿ ಶುಲ್ಕದ ಹಣವನ್ನು ನಾನು ಮೊದಲೇ ಪಾವತಿ ಮಾಡಿದ್ದೆ, ಲಂಚವಾಗಿ ರೂ.40000/- ಅನ್ನು ಆರೋಪಿ ಕೇಳಿದರು. ನನಗೆ ಲಂಚ ಕೊಡುವ ಮನಸ್ಸು ಇರಲಿಲ್ಲ. ಆದ್ದರಿಂದ ನಾನು ಕಾರವಾರದ ಲೋಕಾಯುಕ್ತ ಕಚೇರಿಗೆ ದೂರನ್ನು ಕೊಡಲು ಬಂದಿದ್ದೆ. ಆಗ ಲೋಕಾಯುಕ್ತ ಠಾಣೆಯಲ್ಲಿ ನನಗೆ ವಾಯ್ಸ್ ರೆಕಾರ್ಡರ್ ನ್ನು ನೀಡಿ ಆರೋಪಿ ಜೊತೆ ಕೆಲಸದ ಬಗ್ಗೆ ಮಾತನಾಡಿ ಸಂಭಾಷಣೆಯನ್ನು ಅದರಲ್ಲಿ ಧ್ವನಿ ಮುದ್ರಣ ಮಾಡಿಕೊಳ್ಳುವಂತೆ ಹೇಳಿದರು. ನನ್ನ ಬಳಿ ಕೀಪ್ಯಾಡ್ ಮೊಬೈಲ್ ಮಾತ್ರ ಇರುತ್ತದೆ. ಅದರಲ್ಲಿ ಧ್ವನಿ ಮುದ್ರಣ ಆಗುವುದಿಲ್ಲ. ನನಗೆ ವಾಯ್ಸ್ ರೆಕಾರ್ಡರ್ ನ್ನು ಯಾವ ರೀತಿ ಉಪಯೋಗಿಸಬೇಕು ಎಂದು ಲೋಕಾಯುಕ್ತ ಪೊಲೀಸನವರು ತಿಳಿಸಿದರು. ನಾನು ವಾಯ್ಸ್ ರೆಕಾರ್ಡರ್ ಅನ್ನು

ಪಡೆದ 2-3 ದಿನಕ್ಕೆ ಆರೋಪಿಯನ್ನು ಅಂಕೋಲಾದ International Hotel ನಲ್ಲಿ ಬೇಟಿ ಮಾಡಿದೆ ಅಲ್ಲಿಗೆ ಅವರು ಮಾಮೂಲಿಯಾಗಿ ಚಹಾ ಕುಡಿಯಲು ಬರುತ್ತಿದ್ದರು. ಅಲ್ಲಿ ಆರೋಪಿ ಜೊತೆ ಮಾತನಾಡಿದಾಗ ಆರೋಪಿಯು ಲಂಚದ ಹಣದ ಬಗ್ಗೆ ಬೇಡಿಕೆ ಇಟ್ಟರು. ಆಗ ರೂ.40000/- ಅನ್ನು ಕೊಡುವಂತೆ ಕೇಳಿದರು. ನಾನು ಆಗ ಒಂದೇ ಸಲ ಅಷ್ಟು ಹಣ ಆಗುವುದಿಲ್ಲ, ಎರಡು ದಿವಸ ಬಿಟ್ಟು ಎರಡು ಕಂತಿನಲ್ಲಿ ಹಣ ಪಾವತಿ ಮಾಡುತ್ತೇನೆ ಎಂದು ಆರೋಪಿಗೆ ಹೇಳಿದೆ. ಆಗ ಆರೋಪಿಯ ಜೊತೆ ಆದ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡರ್ ನಲ್ಲಿ ರೆಕಾರ್ಡ ಮಾಡಿಕೊಂಡೆ. ನಂತರ ವಾಯ್ಸ್ ರೆಕಾರ್ಡರ್ ಅನ್ನು ಲೋಕಾಯುಕ್ತ ಠಾಣೆಯಲ್ಲಿ ರಾಜು ಎಂಬ ಆರಕ್ಷಕ ಉಪಾಧೀಕ್ಷಕರಿಗೆ (ದೋಸಾ-30) ನೀಡಿದೆ. ಆಗ ನಾನು ರೂ.15000/- ಅನ್ನು ಲೋಕಾಯುಕ್ತ ಠಾಣೆಗೆ ತೆಗೆದುಕೊಂಡು ಹೋಗಿದ್ದೆ. ಅದರ ದಿನಾಂಕ ನನಗೆ ನೆನಪಿಲ್ಲ. ಆಗ ಲೋಕಾಯುಕ್ತ ಠಾಣೆಯಲ್ಲಿ ನಾನು ಹೇಳಿದ ರೀತಿ ದೂರನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದರು. ಅದಕ್ಕೆ ನಾನು ಓದಿಕೊಂಡು ರುಜು ಮಾಡಿದೆ. ಆ ದೂರನ್ನು ನಾನು ಹೇಳಿದ ರೀತಿ ಬೆರಳಚ್ಚು ಮಾಡಿದ್ದರು. ಆ ದೂರನ್ನು ಮತ್ತು ರುಜುವನ್ನು ನೋಡಿದರೆ ಗುರುತಿಸುತ್ತೇನೆ. ಈಗ ಆ ದೂರನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ನಾನು ದೂರನ್ನು 2023 ರ ಜನವರಿ ತಿಂಗಳಿನಲ್ಲಿ ನೀಡಿದ್ದೇನೆ, ತಾರೀಖು ನೆನಪಿಲ್ಲ.

2. ನಾನು ತೆಗೆದುಕೊಂಡು ಹೋಗಿದ್ದ ಹಣವನ್ನು ಆಗ ಲೋಕಾಯುಕ್ತ ಅಧಿಕಾರಿಯ ಮುಂದೆ ಹಾಜರುಪಡಿಸಿದೆ. ಆ ಸಮಯದಲ್ಲಿ ಇಬ್ಬರು ಪಂಚರನ್ನು ಲೋಕಾಯುಕ್ತ ಅಧಿಕಾರಿಯವರು ಕಾರವಾರದ ಯಾವುದೋ ಸರ್ಕಾರಿ ಕಚೇರಿಗಳಿಂದ ಕರೆಸಿದ್ದರು. ಅವರ ಸಮಕ್ಷಮ ನಾನು ಹಣವನ್ನು ಹಾಜರುಪಡಿಸಿದೆ. ನಾನು ಪಂಚರಿಗೆ ದೂರಿನ ವಿಷಯವನ್ನು ವಿವರವಾಗಿ ಹೇಳಿದೆ. ನನ್ನ ಜಮೀನಿನ ಸರ್ವೆ ಮಾಡಲು ರೂ.40000/- ಲಂಚವನ್ನು ಕೇಳುತ್ತಿರುವುದಾಗಿ ಲಂಚ ಕೊಡಲು ಮನಸಿಲ್ಲದ ಕಾರಣ ದೂರನ್ನು ಕೊಟ್ಟಿರುವುದಾಗಿ ಹೇಳಿದೆ ಹಾಗೂ ಪಂಚರು ನಾನು ಕೊಟ್ಟಿದ್ದ ದೂರನ್ನು ಆಗ ಓದಿಕೊಂಡರು. ನಾನು ಹಾಜರುಪಡಿಸಿದ ಹಣದಲ್ಲಿ ರೂ.500/-ರ 30 ನೋಟುಗಳು ಇದ್ದವು. ನಾನು ಹಾಜರುಪಡಿಸಿದ ವಾಯ್ಸ್ ರೆಕಾರ್ಡರ್ ಅನ್ನು ಲೋಕಾಯುಕ್ತ ಅಧಿಕಾರಿಯವರು ಲ್ಯಾಪ್ ಟಾಪ್ ಸಂಪರ್ಕ ಕಲ್ಪಿಸಿ ಅದರಲ್ಲಿ

ಧ್ವನಿ ಮುದ್ರಣವಾಗಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿದರು. ಆಗ ಪಂಚನಾಮೆ ಮಾಡಲು ಪ್ರಾರಂಭಿಸಿದರು. ಮೇಲ್ಕಂಡ ವಿಚಾರಗಳನ್ನು ಪಂಚನಾಮೆಯಲ್ಲಿ ಬೆರಳಚ್ಚು ಮಾಡಿಸಿದರು. ನಾನು ಹಾಜರುಪಡಿಸಿದ ನೋಟುಗಳ ಸಂಖ್ಯೆಗಳನ್ನು ಬರೆದುಕೊಂಡರು. ಒಬ್ಬ ಪಂಚರು ಆ ನೋಟುಗಳ ಸಂಖ್ಯೆಗಳನ್ನು ನೋಡಿ ಹೇಳಿದರು. ಇನ್ನೊಬ್ಬ ಪಂಚರು ಆ ನೋಟುಗಳ ಸಂಖ್ಯೆಗಳನ್ನು ಒಂದು ಹಾಳೆಯಲ್ಲಿ ಬರೆದುಕೊಂಡರು. ಬರೆದುಕೊಂಡ ಹಾಳೆಗೆ ಪಂಚರು ಮತ್ತು ಲೋಕಾಯುಕ್ತ ಅಧಿಕಾರಿಯವರು ಸಹಿ ಮಾಡಿದರು. ಅ ಸಮಯದಲ್ಲಿ ಆರಕ್ಷಕ ಉಪಾಧೀಕ್ಷಕರು ಅಲ್ಲದೇ ಆರಕ್ಷಕ ನಿರೀಕ್ಷಕರು ಮತ್ತು ಬೇರೆ ಸಿಬ್ಬಂದಿಗಳು ಸಹ ಇದ್ದರು. ಅವರಲ್ಲಿ ಮಹಿಳಾ ಸಿಬ್ಬಂದಿ ಸಹ ಇದ್ದರು. ವಾಯ್ಸ್ ರೆಕಾರ್ಡರ್ ನಲ್ಲಿ ಇದ್ದ ಸಂಭಾಷಣೆಯನ್ನು ಆಲಿಸಿದ ಮೇಲೆ ಆ ಸಂಭಾಷಣೆಯನ್ನು ಸಿಡಿಗಳಿಗೆ ಲೋಕಾಯುಕ್ತ ಸಿಬ್ಬಂದಿ ಭರಣ ಮಾಡಿದರು. ಆಗ ಸಿಡಿಗಳನ್ನು ಸೀಲು ಮಾಡಿ ಅವರ ವಶಕ್ಕೆ ತೆಗೆದುಕೊಂಡರು. ಆ ನೋಟುಗಳ ಸಂಖ್ಯೆಗಳನ್ನು ಆಗ ಬರೆದುಕೊಂಡ ಹಾಳೆಯನ್ನು ಗುರುತಿಸುತ್ತೇನೆ. ಅದರಲ್ಲಿ ಪಂಚರ ಮತ್ತು ಆರಕ್ಷಕ ಅಧಿಕಾರಿಯವರ ಸಹಿ ಇದೆ. ಆ ಹಾಳೆಯನ್ನು ನಿಪಿ–2 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಜಪ್ತು ಮಾಡಿದ ಮೇಲೆ ಹೇಳಿದ ಸಿಡಿ ಅನ್ನು ಗುರುತಿಸುತ್ತೇನೆ. ಈಗ ಆಗ ಸಿಡಿ ಜಪ್ತು ಮಾಡಿರುವ ಮೊಹರಾದ ಲಕೋಟೆಯನ್ನು ನೋಡಿದ್ದು ಅದು ಆಗ ಜಪ್ತು ಮಾಡಿದ ಸಿಡಿ ಆಗಿರುತ್ತದೆ. ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. (ಅದು ಮೊಹರಾದ ಲಕೋಟೆಯಲ್ಲಿ ಇದ್ದು ಮೊಹರು ಸುಸ್ಥಿತಿಯಲ್ಲಿ ಇದ್ದು ಆರೋಪಿ ಮತ್ತು ಆರೋಪಿ ಪರ ವಕೀಲರ ಸಮಕ್ಷಮ ಅದನ್ನು ಪರಿಶೀಲಿಸಿ ಖಾತ್ರಿ ಪಡಿಸಿಕೊಳ್ಳಲಾಯಿತು).

3. ನಂತರ ನಾನು ಹಾಜರುಪಡಿಸಿದ ನೋಟುಗಳಿಗೆ ಕೆಮಿಕಲ್ ಪುಡಿಯನ್ನು ಲೋಕಾಯುಕ್ತ ಮಹಿಳಾ ಸಿಬ್ಬಂದಿ ಸವರಿದರು. ಆಕೆಯ ಹೆಸರು ನನಗೆ ಗೊತ್ತಿಲ್ಲ. ಆ ರೀತಿ ಲೇಪನ ಮಾಡಿದ ಮೇಲೆ ಆ ನೋಟುಗಳನ್ನು ಒಬ್ಬ ಪಂಚರು ಎಣಿಸಿದರು. ಎಣಿಸಿದ ನಂತರ ಸದರಿ ಪಂಚರು ಆ ನೋಟುಗಳನ್ನು ನನ್ನ ಅಂಗಿಯ ಎಡ ಕಿಸೆಯಲ್ಲಿ ಇಟ್ಟರು. ನಂತರ ಸದರಿ ಪಂಚರ ಕೈಗಳನ್ನು ಒಂದು ಬಟ್ಟಲಿನಲ್ಲಿ ಇದ್ದ ಕೆಮಿಕಲ್ ನೀರಿನಲ್ಲಿ ತೊಳೆದರು. ಆಗ ಮೊದಲು ನೀರಿನ ಬಣ್ಣ ಹೊಂದಿದ್ದ ಆ ಕೆಮಿಕಲ್ ನೀರು ಕೈಗಳನ್ನು ಪಂಚರು ಅದ್ದಿ ತೊಳೆದ ಮೇಲೆ ಅದು ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು. ಆ ರೀತಿ ಬಣ್ಣ ಪರಿವರ್ತನೆಯಾದ ಕೆಮಿಕಲ್ ನೀರನ್ನು ಒಂದು ಬಾಟಲಿಯಲ್ಲಿ ಸಂಗ್ರಹಿಸಿ ಸೀಲ್ ಮಾಡಿ ವಶಕ್ಕೆ ತೆಗೆದುಕೊಂಡರು. ನಾನು

ಸದರಿ ಬಾಟಲಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಮೊಹರಾದ ಗುಲಾಬಿ ಬಣ್ಣದ ದ್ರಾವಣ ಇರುವ ಬಾಟಲಿಯನ್ನು ತೋರಿಸಿದ್ದು ಅದು ಆಗ ಜಪ್ತು ಮಾಡಿದ್ದು ಆಗಿರುತ್ತದೆ. ಅದನ್ನು ಗುರುತಿಸುರುತ್ತೇನೆ. ಅದನ್ನು ಮು.ಮಾ–2 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಬೇರೆ ವಸ್ತುಗಳನ್ನು ಜಪ್ತು ಮಾಡಿದರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಆ ಸಮಯದಲ್ಲಿ ಇನ್ನು ಎರಡು ಬಾಟಲಿ ಮತ್ತು ಲಕೋಟೆಯನ್ನು ಜಪ್ತು ಮಾಡಿದರು. ಲಕೋಟೆಯಲ್ಲಿ ಪುಡಿಯನ್ನು ಜಪ್ತು ಮಾಡಿದರು. ಈಗ ಆ ಸಮಯದಲ್ಲಿ ಪುಡಿ ಜಪ್ತು ಮಾಡಿದ ಮೊಹರಾದ ಲಕೋಟೆ ನೋಡಿರುತ್ತೇನೆ. ಅದನ್ನು ಮು.ಮಾ –3 ಎಂದು ಗುರುತಿಸಲಾಯಿತು. ಈಗ ಆಗ ಮಾದರಿ ಭಟ್ಟಿ ಇಳಿಸಿದ ನೀರನ್ನು ಜಪ್ತು ಮಾಡಿದ ಮೊಹರಾದ ಬಾಟಲಿಯನ್ನು ನೋಡಿರುತ್ತೇನೆ. ಅದನ್ನು ಮು.ಮಾ –4 ಎಂದು ಗುರುತಿಸಲಾಯಿತು.  ಈಗ ಆ ಸಮಯದಲ್ಲಿ ಜಪ್ತು ಮಾಡಿದ ಮತ್ತೊಂದು ಪುಡಿ ಇರುವ ಮೊಹರಾದ ಲಕೋಟೆ ನೋಡಿರುತ್ತೇನೆ. ಅದನ್ನು ಗುರುತಿಸಿರುತ್ತೇನೆ. ಅದನ್ನು ಮು.ಮಾ –5 ಎಂದು ಗುರುತಿಸಲಾಯಿತು. (ಅದು ಸೋಡಿಯಮ್ ಕಾರ್ಬೋನೆಟ್ ಪುಡಿ ಮಾದರಿ ಸಂಗ್ರಹಿಸಿರುವ ಲಕೋಟೆ ಆಗಿದೆ). ಈಗ ಆ ಸಮಯದಲ್ಲಿ ಮಾದರಿಗಾಗಿ ಸಂಗ್ರಹಿಸಿದ ದ್ರಾವಣ ಇರುವ ಮೊಹರಾದ ಬಾಟಲ್ ನೋಡಿರುತ್ತೇನೆ ಮತ್ತು ಗುರುತಿಸಿರುತ್ತೇನೆ. ಅದನ್ನು ಮು.ಮಾ 6 ಎಂದು ಗುರುತಿಸಲಾಯಿತು. (ಮು.ಮಾ 2 ರಿಂದ 6 ಕ್ಕೆ ಹಾಕಿರುವ ಮೊಹರುಗಳನ್ನು ಆರೋಪಿ ಮತ್ತು ಅವರ ವಕೀಲರ ಸಮಕ್ಷಮ ಪರಿಶೀಲಿಸಿದ್ದು, ಸದರಿ ಮೊಹರುಗಳು ಸುಸ್ಥಿತಿಯಲ್ಲಿ ಇರುತ್ತವೆ.) ನನಗೆ ಕೊಟ್ಟಿದ್ದ ವಾಯ್ಸ್ ರೆಕಾರ್ಡರ್ ಅನ್ನು ನನಗೆ ಚಾಲನೆ ಮಾಡಲು ಅವರು ಹೇಳಿ ಕೊಟ್ಟಿದ್ದರಿಂದ ಗೊತ್ತಿತ್ತು. ನಾನು ವಾಯ್ಸ್ ರೆಕಾರ್ಡರ್ ಅನ್ನು ನೀಡುವಂತೆ ಪಿರ್ಯಾದನ್ನು ನೀಡುವುದಕ್ಕೆ ಮೊದಲು ಲೋಕಾಯುಕ್ತ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದೆ. ಈಗ ಆ ಅರ್ಜಿ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಅರ್ಜಿಯನ್ನು ನಿಪಿ–3 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಾನು ವಾಯ್ಸ್ ರೆಕಾರ್ಡರ್ ಅನ್ನು ಉಪಯೋಗಿಸಿದ ಬಗ್ಗೆ ಅದನ್ನು ಉಪಯೋಗಿಸಲು ತಿಳುವಳಿಕೆ ಕಲಿತ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ಪ್ರಮಾಣ ಪತ್ರವನ್ನು ಲೋಕಾಯುಕ್ತ ಪೊಲೀಸ ನವರಿಗೆ ನೀಡಿರುತ್ತೇನೆ. ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಪ್ರಮಾಣ ಪತ್ರವನ್ನು ನಿಪಿ–4 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ–4 (ಎ) ಎಂದು ಗುರುತಿಸಲಾಯಿತು.

ಮೇಲ್ಕಂಡ ಪ್ರಕ್ರಿಯೆ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆಸಿದರು. ಈಗ ಆ ಛಾಯಾಚಿತ್ರಗಳನ್ನು ನೋಡಿರುತ್ತೇನೆ. ಅವುಗಳನ್ನು ನಿಪಿ–5 ರಿಂದ 22 ಎಂದು ಗುರುತಿಸಲಾಯಿತು. ಆ ಛಾಯಾಚಿತ್ರಗಳನ್ನು ಮೇಲ್ಕಂಡ ಪ್ರಕ್ರಿಯೇಯ ಸಮಯದಲ್ಲಿ ಪ್ರತಿ ಹಂತದಲ್ಲಿ ತೆಗೆದಿರುತ್ತಾರೆ. ನಾನು ದೂರನ್ನು ಕೊಡುವಾಗ ತೆಗೆದಿರುವ ಛಾಯಾಚಿತ್ರ ಸಹ ಅದರಲ್ಲಿ ಇದೆ. ಮೇಲ್ಕಂಡ ಪ್ರಕ್ರಿಯೆ ಮುಗಿದ ಮೇಲೆ ನಾವೆಲ್ಲರೂ ನಮ್ಮ ಕೈಗಳನ್ನು ತೊಳೆದುಕೊಂಡೆವು. ಆಗ ಸಹ ಛಾಯಾಚಿತ್ರ ತೆಗೆದಿದ್ದು , ಮೇಲ್ಕಂಡ ನಿಪಿ–20 ಛಾಯಾಚಿತ್ರದಲ್ಲಿ ಇರುತ್ತದೆ. ನಿಪಿ–11 ಛಾಯಾಚಿತ್ರ ದಲ್ಲಿ ನಾನು ಹಾಜರುಪಡಿಸಿದ ನೋಟುಗಳಿಗೆ ಕೆಮಿಕಲ್ ಪುಡಿ ಲೇಪನ ಮಾಡುತ್ತಿರುವುದು ಕಾಣುತ್ತದೆ. ನಿಪಿ–12 ಛಾಯಾಚಿತ್ರದಲ್ಲಿ ಪುಡಿ ಲೇಪನ ಮಾಡಿದ ಸಿಬ್ಬಂದಿ ಆ ನೋಟುಗಳನ್ನು ಪಂಚಸಾಕ್ಷಿಗೆ ಕೊಡುತ್ತಿರುವುದು ಕಾಣುತ್ತದೆ. ನಿಪಿ–13 ಛಾಯಾಚಿತ್ರ ಸದರಿ ಪಂಚಸಾಕ್ಷಿ ಆ ನೋಟುಗಳನು ಎಣಿಸುತ್ತಿರುವುದು ಕಾಣುತ್ತದೆ. ನಿಪಿ–14 ಛಾಯಾಚಿತ್ರದಲ್ಲಿ ಮತ್ತೊಬ್ಬ ಲೋಕಾಯುಕ್ತ ಸಿಬ್ಬಂದಿ ಕೆಮಿಕಲ್ ನೀರು ತಯಾರಿಸುತ್ತಿರುವುದು ಕಾಣುತ್ತದೆ. ನಿಪಿ–15 ಛಾಯಾಚಿತ್ರದಲ್ಲಿ ಅದರಿಂದ ಬಾಟಲಿಗೆ ಮಾದರಿ ಕೆಮಿಕಲ್ ನೀರನ್ನು ಸಂಗ್ರಹಿಸುತ್ತಿರುವುದು ಕಾಣುತ್ತದೆ. ನಿಪಿ–16 ಛಾಯಾಚಿತ್ರದಲ್ಲಿ ಪಂಚಸಾಕ್ಷಿ ಆ ನೋಟುಗಳನ್ನು ನನ್ನ ಅಂಗಿಯ ಎಡಕಿಸೆಯಲ್ಲಿ ಇಡುತ್ತಿರುವುದು ಕಾಣುತ್ತದೆ. ನಿಪಿ–17 ಛಾಯಾಚಿತ್ರದಲ್ಲಿ ಇನ್ನೊಬ್ಬ ಪಂಚ ಕೈಯನ್ನು ಬಟ್ಟಲಿನಲ್ಲಿ ತೊಳೆದುಕೊಳ್ಳವುದು ಕಂಡು ಬರುತ್ತದೆ. ನಿಪಿ–18 ಛಾಯಾಚಿತ್ರದಲ್ಲಿ ನನ್ನ ಕಿಸೆಯಲ್ಲಿ ನೋಟು ಇಟ್ಟ ಪಂಚ ಕೆಮಿಕಲ್ ನೀರಿನಲ್ಲಿ ಕೈ ತೊಳೆದುಕೊಳ್ಳುತ್ತಿರುವುದು ಕಾಣುತ್ತದೆ. ನಿಪಿ–21 ಛಾಯಾಚಿತ್ರದಲ್ಲಿ ಆರಕ್ಷಕ ಉಪಾಧೀಕ್ಷಕರು ನನಗೆ ವಾಯ್ಸ್ ರೆಕಾರ್ಡರ್ ಅನ್ನು ಕೊಡುತ್ತಿರುವುದು ಕಾಣುತ್ತದೆ. ನಿಪಿ–22 ಛಾಯಾಚಿತ್ರದಲ್ಲಿ ಪಂಚನಾಮೆಯನ್ನು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡುತ್ತಿರುವುದು ಕಂಡುಬರುತ್ತದೆ. ಆ ಸಮಯದಲ್ಲಿ ಪಂಚನಾಮೆಗೆ ನಾನು, ಪಂಚರು, ಲೋಕಾಯುಕ್ತ ಅಧಿಕಾರಿಗಳು ಸಹಿ ಮಾಡಿದೆವು. ಈಗ ಆ ಪಂಚನಾಮೆ ನೋಡಿರುತ್ತೇನೆ. ಅದನ್ನು ನಿಪಿ–23 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ನಿಪಿ–23 (ಎ) ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿದ ವಾಯ್ಸ್ ರೆಕಾರ್ಡರ್ ನಲ್ಲಿ ಇದ್ದ ಸಂಭಾಷಣೆಯನ್ನು ಆಲಿಸಿದ ಮೇಲೆ ಆ ಸಂಭಾಷಣೆಯನ್ನು ನಿಪಿ–23 ಪಂಚನಾಮೆಯಲ್ಲಿ ಲಿಪೀಕರಣ ಮಾಡಿದ್ದಾರೆ. ನಾನು ಆ ಪಂಚನಾಮೆಯನ್ನು ವಿವರವಾಗಿ ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

4. ನಾನು ಪಿರ್ಯಾದನ್ನು ಕೊಡುವುದಕ್ಕೆ ಮೊದಲು ಧ್ವನಿ ಮುದ್ರಣ ಮಾಡಿಕೊಂಡಿದ್ದ ಸಂಭಾಷಣೆಯನ್ನು ಈಗ ಕೇಳಿಸಿದರೆ ಗುರುತಿಸುತ್ತೇನೆ. ಈ ಮು.ಮಾಲು 1(ವಸ್ತು ಸಂಖ್ಯೆ 1) ಮೊಹರಾದ ಲಕೋಟೆಯಿಂದ ತೆರೆದ ನ್ಯಾಯಾಲಯದಲ್ಲಿ ಸಿಡಿ ಅನ್ನು ಹೊರ ತೆಗೆದು ಲ್ಯಾಪ್ ಟಾಪ್ ಮತ್ತು ವಿಸಿ ಮಾನಿಟರ್ ಮೂಲಕ ಚಾಲು ಮಾಡಿ ಕೇಳಿಸಿದ್ದು, ಅದರಲ್ಲಿ 57 ನೇ ನಿಮಿಷದಿಂದ 1-08-00 ಅವಧಿಯ ಸಂಭಾಷಣೆಯನ್ನು ಕೇಳಿಸಿದ್ದು, ನಾನು ಅದನ್ನು ಆಲಿಸಿರುತ್ತೇನೆ. ಅದು ದೂರನ್ನು ಕೊಡುವ ಸಂದರ್ಭದಲ್ಲಿ ನನಗೆ ವಾಯ್ಸ್ ರೆಕಾರ್ಡರ್ ಅನ್ನು ನನಗೆ ಕೊಟ್ಟ ನಂತರ ಆರೋಪಿ ಜೊತೆ ಆಗಿರುವ ಸಂಭಾಷಣೆ ಆಗಿರುತ್ತದೆ. ಆ ಸಂಭಾಷಣೆಯಲ್ಲಿ ಐಶ್ವರ್ಯ ಎಂಬ ಹೆಸರು ಇದ್ದು , ಅದು ಆರೋಪಿಯ ಸಿಬ್ಬಂದಿ ಹೆಸರು ಆಗಿದ್ದು ಅವರು ನೋಟಿಸು ಜಾರಿ ಮಾಡುವ ಸಿಬ್ಬಂದಿ ಆಗಿದ್ದಾರೆ. ಆ ಸಂಭಾಷಣೆಯಲ್ಲಿ ಆರೋಪಿ ರೊಕ್ಕ ಕೇಳಿರುವುದು ದಾಖಲಾಗಿದೆ. ಇದಾದ ನಂತರ ನನ್ನ ದೂರನ್ನು ನೊಂದು ಮಾಡಿಕೊಂಡಿದ್ದಾರೆ.

5. ನನ್ನ ಕಿಸೆಯಲ್ಲಿ ಲೇಪನ ಮಾಡಿದ ಹಣವನ್ನು ಇಟ್ಟಿದ್ದನ್ನು ಆರೋಪಿಯನ್ನು ಬೇಟಿ ಮಾಡಿದಾಗ ಆರೋಪಿ ಕೇಳಿದರೆ ಕೊಡುವಂತೆ ಲೋಕಾಯುಕ್ತ ಅಧಿಕಾರಿ ನನಗೆ ತಿಳಿಸಿದರು. ಆಗ ಪುನಃ ನನಗೆ ವಾಯ್ಸ್ ರೆಕಾರ್ಡರ್ ಅನ್ನು ಆ ಸಮಯದಲ್ಲಿ ನೀಡಿದರು. ನಾನು ಆರೋಪಿಯ ಕಚೇರಿಗೆ ಹೋದಾಗ ಆರೋಪಿ ರೊಕ್ಕ ತೆಗೆದುಕೊಳ್ಳುವಾಗ ಆಗುವ ಸಂಭಾಷಣೆಯನ್ನು ಆ ವಾಯ್ಸ್ ರೆಕಾರ್ಡರ್ ನಲ್ಲಿ ರೆಕಾರ್ಡ ಮಾಡಿಕೊಳ್ಳುವಂತೆ ಹೇಳಿ ವಾಯ್ಸ್ ರೆಕಾರ್ಡರ್ ಅನ್ನು ಕೊಟ್ಟರು. ಆರೋಪಿಯನ್ನು ಬೇಟಿ ಮಾಡಿದಾಗ ಆರೋಪಿ ಹಣವನ್ನು ಪಡೆದರೆ ನಾನು ಧರಿಸಿರುವ ಕ್ಯಾಪ್ ಅನ್ನು ತೆಗೆದು ಸನ್ನೆ ನೀಡುವಂತೆ ನನಗೆ ಲೋಕಾಯುಕ್ತ ಅಧಿಕಾರಿ ಸೂಚನೆ ನೀಡಿದರು. ನಿಪಿ-23 ಪಂಚನಾಮೆಯನ್ನು ಕಾರವಾರದ ಲೋಕಾಯುಕ್ತ ಕಚೇರಿಯಲ್ಲಿ ಮಾಡಿದರು. ಬೆಳಗ್ಗೆ 10.30 ಗೆ ಪ್ರಾರಂಭಿಸಿ ಮಧ್ಯಾಹ್ನ ಊಟದ ಸಮಯಕ್ಕೆ ಮುಗಿಸಿದರು.

6. ನಂತರ ಅದೇ ದಿನ ಮಧ್ಯಾಹ್ನದ ನಂತರ ಸುಮಾರು 4.30 ಗಂಟೆಗೆ ಕಾರವಾರದಿಂದ ಲೋಕಾಯುಕ್ತ ಕಚೇರಿಯ 2 ಜೀಪ್ ನಲ್ಲಿ ಅಂಕೋಲಾಗೆ ಹೊರಟೆವು. ನಾನು, ಪಂಚರು, ಲೋಕಾಯುಕ್ತ ಸಿಬ್ಬಂದಿ ಮತ್ತು ಅಧಿಕಾರಿಯವರು ಜೀಪ್ ಗಳಲ್ಲಿ ಹೋದೆವು. ಸುಮಾರು ಸಂಜೆ

5.00 ಗಂಟೆಗೆ ಅಂಕೋಲಾ ತಲುಪಿದೆವು. ಅಂಕೋಲಾಗೆ ಹೋದಾಗ ಆರೋಪಿ ಕಚೇರಿಯಲ್ಲಿ ಇರಲಿಲ್ಲ. ನಾನು ಆರೋಪಿಗೆ ಫೋನ್ ಮಾಡಿದೆ. ಆರೋಪಿ ಕರೆ ಸ್ವೀಕರಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ International Hotel ಗೆ 3 ನೇ ಮಹಡಿಗೆ ಬರುವುದಾಗಿ ಅಲ್ಲಿಗೆ ಬರುವಂತೆ ನನಗೆ ತಿಳಿಸಿದರು. ಅಲ್ಲಿ 3 ನೇ ಮಹಡಿಯಲ್ಲಿ ಊಟ, ತಿಂಡಿ ನೀಡುವ ಮೇಜು ಶರಬತ್ತು, ತಂಪುಪಾನಿಯ ಮತ್ತು ಮಧ್ಯಪಾನವನ್ನು ಮೇಜಿಗೆ ಸರ್ವಿಸ್ ನೀಡುತ್ತಾರೆ. ಅಲ್ಲಿ ಕುಳಿತುಕೊಳ್ಳಲು ಬಹಳಷ್ಟು ಕುರ್ಚಿಗಳು ಮತ್ತು ಮೇಜು ಇವೆ. ನಾನು ಆಗ ಸದರಿ ಹೊಟೇಲ್ ನ ಮೂರನೇ ಮಹಡಿಗೆ ಹೋದೆ, ನನ್ನ ಜೊತೆಯಲ್ಲಿ ಒಬ್ಬ ಪಂಚ ಬಂದರು. ಬಾಕಿ ಲೋಕಾಯುಕ್ತ ಅಧಿಕಾರಿ ಸಿಬ್ಬಂದಿ ಮತ್ತು ಇನ್ನೊಬ್ಬ ಪಂಚ ರಸ್ತೆಯಲ್ಲಿ ಉಳಿದುಕೊಂಡರು. ಅವರು ರಸ್ತೆಯಲ್ಲಿರುವುದು 3 ನೇ ಮಹಡಿಯಿಂದ ಕಾಣುತ್ತಿತ್ತು. ನನ್ನ ಜೊತೆ ಅಲ್ಲಿಗೆ ಬಂದ ನನಗೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಕಿಸೆಯಲ್ಲಿ ಹಣ ಇಟ್ಟ ಪಂಚ ಅಲ್ಲ. ನನ್ನ ಜೊತೆ ಬಂದಿದ್ದು ಇನ್ನೊಬ್ಬ ಪಂಚ. ಅಲ್ಲಿಗೆ ಕಳುಹಿಸುವದಕ್ಕೆ ಮೊದಲು ಆರಕ್ಷಕ ಉಪಾಧೀಕ್ಷಕರು ನನಗೆ ಆರೋಪಿ ರೊಕ್ಕ ಕೇಳಿದರೆ ನನ್ನ ಕಿಸೆಯಲ್ಲಿರುವ ಹಣವನ್ನು ಕೊಡುವಂತೆ ಹೇಳಿದರು ಮತ್ತು ನನ್ನ ಜೊತೆ ಬಂದ ಪಂಚರವರಿಗೆ ಅದನ್ನು ಗುಮನಿಸುವಂತೆ ಹೇಳಿದರು. ಹಣವನ್ನು ಆರೋಪಿ ಪಡೆದರೆ ಹಿಂದೆ ಸೂಚನೆ ನೀಡಿದ ಪ್ರಕಾರ ಸನ್ನೆ ಮಾಡಲು ಹೇಳಿದರು. ನಾನು ಸದರಿ ಹೋಟೇಲ್ ನ 3 ನೇ ಮಹಡಿಗೆ ಹೋದೆ, ನಂತರ ಆರೋಪಿ ಅಲ್ಲಿಗೆ ಬಂದು ನಾನು ಕುಳಿತಿದ್ದ ಮೇಜಿನಲ್ಲಿ ಎದುರುಗಡೆ ಕುರ್ಚಿಯಲ್ಲಿ ಕುಳಿತ. ಆಗ ನನ್ನ ಜೊತೆ ಬಂದಿದ್ದ ಪಂಚ ಸಮೀಪದಲ್ಲಿ ಬೇರೆ ಮೇಜಿನಲ್ಲಿ ಕುಳಿತಿದ್ದ. ಆರೋಪಿ ಮತ್ತು ನನ್ನ ನಡುವೆ ಆಗ ಸಂಭಾಷಣೆ ಆಯಿತು. ಆ ಸಂಭಾಷಣೆ ನನ್ನ ಬಳಿ ಇದ್ದ ವಾಯ್ಸ್ ರೆಕಾರ್ಡರ್ ನಲ್ಲಿ ಧ್ವನಿ ಮುದ್ರಣ ಆಗಿರುತ್ತದೆ. ಆ ಸಮಯದಲ್ಲಿ ಆರೋಪಿ ನನಗೆ ರೂ.15000/- ಕೊಡುವಂತೆ ಕೇಳಿದ. ನಾನು ಆರೋಪಿಗೆ ಆಗ ಲೋಕಾಯುಕ್ತ ಪೊಲೀಸನವರು ನನ್ನ ಕಿಸೆಯಲ್ಲಿ ಇಟ್ಟಿದ್ದ ರೂ.15000/- ಹಣವನ್ನು ತೆಗೆದುಕೊಟ್ಟೆ, ಆರೋಪಿ ಆ ಹಣವನ್ನು ಬಲಗೈಯಿಂದ ಪಡೆದು ಎಡಗೈಗೆ ತೆಗೆದುಕೊಂಡು ತನ್ನ ಎಡಪ್ಯಾಂಟಿನ ಕಿಸೆಯಲ್ಲಿ ಇಟ್ಟುಕೊಂಡ. ನಂತರ ನಾನು ಲೋಕಾಯುಕ್ತ ಪೊಲೀಸನವರಿಗೆ ಸನ್ನೆ ಮಾಡಿದೆ. ಮತ್ತೊಬ್ಬ ಪಂಚ ನನ್ನ ಜೊತೆ ಬಂದಿದ್ದವನು ಇದನೆಲ್ಲಾ ನೋಡಿರುತ್ತಾನೆ ಮತ್ತು ನನ್ನ ಹಾಗೂ ಆರೋಪಿಯ ನಡುವೆ ಸಂಭಾಷಣೆಯನ್ನು ಕೇಳಿಸಿಕೊಂಡಿರುತ್ತಾನೆ. ನಾವು ಮಾತನಾಡುತ್ತಿರುವುದು ಸದರಿ ಪಂಚನಿಗೆ ಕೇಳಿಸುತ್ತಿತ್ತು. ನಾನು ಸನ್ನೆ ನೀಡಿದ ಕೂಡಲೇ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿ ಎಲ್ಲರೂ ಅಲ್ಲಿಗೆ ಬಂದರು. ನಾನು ಆಗ ಆರೋಪಿಯನ್ನು

ಆರಕ್ಷಕ ಉಪಾಧೀಕ್ಷಕರು ಮತ್ತು ಅವರ ತಂಡದವರಿಗೆ ತೋರಿಸಿದೆ. ಅವರು ಸಮವಸ್ತ್ರ ಧರಿಸಿರಲಿಲ್ಲ, ಆರಕ್ಷಕ ಉಪಾಧೀಕ್ಷಕರು ಆಗ ಅವರ ಗುರುತಿನ ಚೀಟಿಯನ್ನು ಆರೋಪಿಗೆ ತೋರಿಸಿ ತಮ್ಮ ಪರಿಚಯವನ್ನು ತಾವು ಲೋಕಾಯುಕ್ತ ಉಪಾಧೀಕ್ಷಕರು ಎಂದು ತಿಳಿಸಿದರು. ಅವರು ತನಿಖೆ ಮಾಡುತ್ತಿರುವುದಾಗಿ ಸಹಕರಿಸಲು ಆರೋಪಿಗೆ ಕೇಳಿದರು. ನನ್ನನ್ನು ಏನು ನಡೆಯಿತು ಎಂದು ಕೇಳಿದರು. ನಾನು ಆರೋಪಿ ಲಂಚದ ಹಣ ಕೇಳಿದ್ದಾಗಿ ನಾನು ಹಣವನ್ನು ಕೊಟ್ಟಿದ್ದಾಗಿ ಅದನ್ನು ಆರೋಪಿ ಕೈಯಿಂದ ಪಡೆದು ತನ್ನ ಪ್ಯಾಂಟಿನ ಎಡಕಿಸೆಯಲ್ಲಿ ಇಟ್ಟುಕೊಂಡ ಎಂದು ಲೋಕಾಯುಕ್ತ ಉಪಾಧೀಕ್ಷಕರಿಗೆ ತಿಳಿಸಿದೆ. ನಂತರ ತನಿಖಾಧಿಕಾರಿ ನನ್ನ ಜೊತೆ ಬಂದಿದ್ದ ಪಂಚ ಸಾಕ್ಷಿಯನ್ನು ವಿಚಾರಿಸಿದರು. ಸದರಿ ಪಂಚ ಸಹ ನಾನು ಹೇಳಿದ ರೀತಿ ತನಿಖಾಧಿಕಾರಿಗೆ ತಿಳಿಸಿದರು. ಆಗ ಆರೋಪಿಯ ಕೈಗಳನ್ನು ಲೋಕಾಯುಕ್ತ ಸಿಬ್ಬಂದಿಯವರು ಹಿಡಿದುಕೊಂಡರು. ಆಗ ಆ ಹೋಟೆಲ್ ನಲ್ಲಿಯೇ ಲೋಕಾಯುಕ್ತ ಸಿಬ್ಬಂದಿ ಕೆಮಿಕಲ್ ನೀರನ್ನು ತಯಾರಿಸಿದರು. 2 ಬಟ್ಟಲಿನಲ್ಲಿ ಅದನ್ನು ತಯಾರಿಸಿದರು. ನಂತರ ಆರೋಪಿಯ ಎರಡೂ ಕೈಗಳನ್ನು ಬೇರೆ ಬೇರೆ ಬಟ್ಟಲಿನಲ್ಲಿ ಇದ್ದ ಕೆಮಿಕಲ್ ನೀರಿನಲ್ಲಿ ಪ್ರತ್ಯೇಕವಾಗಿ ಅದ್ದಿಸಿ ತೊಳೆಸಿದರು. ಆಗ ಎರಡೂ ಬಟ್ಟಲ್ಲಿದ್ದ ಧ್ರಾವಣ ಅಂದರೆ ಆರೋಪಿಯ ಎರಡೂ ಕೈಗಳನ್ನು ತೊಳೆದ ಧ್ರಾವಣ ಮೊದಲು ನೀರಿನ ಬಣ್ಣ ಹೊಂದಿದ್ದದ್ದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು. ಆ ಬಣ್ಣ ಪರಿವರ್ತನೆಯಾದ ಧ್ರಾವಣವನ್ನು ಬೇರೆ ಬೇರೆ ಬಾಟಲಿಗಳಲ್ಲಿ ಹಾಕಿ ಸೀಲ್ ಮಾಡಿ ವಶಕ್ಕೆ ಪಡೆದರು. ಅದಕ್ಕೆಲ್ಲಾ ಪಂಚರು ಮತ್ತು ತನಿಖಾಧಿಕಾರಿ ಸಹಿ ಮಾಡಿದ ಚೀಟಿಯನ್ನು ಅಂಟಿಸಿದರು. ನಾನು ಆಗ ಜಪ್ತು ಮಾಡಿದ ಸದರಿ ಬಣ್ಣ ಪರಿವರ್ತನೆಯಾದ ಧ್ರಾವಣ ಇರುವ ಬಾಟಲಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ಆರೋಪಿಯ ಬಲಗೈ ತೊಳೆದ ಧ್ರಾವಣವನ್ನು ನೋಡಿರುತ್ತೇನೆ. ಅದು ಮೊಹರಾದ ಪ್ಲಾಸ್ಟಿಕ್ ಬಾಟಲಿಯಲ್ಲಿದೆ. ಅದನ್ನು ಮು.ಮಾಲು 7 ಎಂದು ಗುರುತಿಸಲಾಯಿತು. ಈಗ ನಾನು ಆರೋಪಿಯ ಎಡಗೈ ತೊಳೆದ ಧ್ರಾವಣವನ್ನು ನೋಡಿರುತ್ತೇನೆ. ಅದು ಮೊಹರಾದ ಪ್ಲಾಸ್ಟಿಕ್ ಬಾಟಲಿಯಲ್ಲಿದೆ. ಅದನ್ನು ಮು.ಮಾಲು 8 ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ಅವನು ಪಡೆದ ಲಂಚದ ಹಣವನ್ನು ಎಲ್ಲಿ ಇಟ್ಟುಕೊಂಡಿದ್ದಾನೆ ಎಂದು ಕೇಳಿ ಹಾಜರುಪಡಿಸಲು ತನಿಖಾಧಿಕಾರಿ ಆರೋಪಿಗೆ ಹೇಳಿದರು. ಆಗ ಆರೋಪಿಯು ಆರಕ್ಷಕ ಉಪಾಧೀಕ್ಷಕರ ಸೂಚನೆಯ ಮೇರೆಗೆ ಅವನ ಪ್ಯಾಂಟಿನ ಎಡಕಿಸೆಯಿಂದ ಅವನು ತೆಗೆದುಕೊಂಡಿದ್ದ  ಹಣವನ್ನು ತೆಗೆದು ನನ್ನ ಕಿಸೆಗೆ ಹಿಂದೆ ಆ ಹಣವನ್ನು ಇಟ್ಟಿದ್ದ ಪಂಚ ಸಾಕ್ಷಿಯ

ಕೈಯಲ್ಲಿ ಆಗ ಕೊಟ್ಟ . ಆಗ ಆ ಪಂಚಸಾಕ್ಷಿ ಆ ನೋಟುಗಳನ್ನು ಎಣಿಸಿದರು ಮತ್ತು ಅವುಗಳ ಸಂಖ್ಯೆಗಳನ್ನು ಹೇಳಿದರು. ಆ ನೋಟುಗಳ ಸಂಖ್ಯೆಗಳನ್ನು ಮತ್ತೊಬ್ಬ ಪಂಚ ಬಿಳಿ ಹಾಳೆಯಲ್ಲಿ ಬರೆದುಕೊಂಡರು. ಅದಕ್ಕೆ ಇಬ್ಬರೂ ಪಂಚರು ಮತ್ತು ಲೋಕಾಯುಕ್ತ ಅಧಿಕಾರಿ ಸಹಿ ಮಾಡಿದರು. ಆ ನೋಟುಗಳ ಸಂಖ್ಯೆ ನನಗೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ವಹಿಸಿಕೊಟ್ಟದ್ದ ನೋಟುಗಳ ಸಂಖ್ಯೆಯೇ ಆಗಿದ್ದವು. ಅದು ಒಟ್ಟು ರೂ.15000/- ಇತ್ತು. ಆಗ ಆ ನೋಟುಗಳ ಸಂಖ್ಯೆ ಬರೆದುಕೊಂಡ ಹಾಳೆಯನ್ನು ಈಗ ನೋಡಿರುತ್ತೇನೆ. ಅದು ನಿಪಿ-2 ಹಿಂಬದಿ ಪುಟದಲ್ಲಿ ಇರುತ್ತದೆ. ಆ ನೋಟುಗಳನ್ನು ಆಗ ಒಂದು ಲಕೋಟೆಯಲ್ಲಿ ಹಾಕಿ ಸೀಲು ಹಾಕಿ ಜಪ್ತು ಮಾಡಿದರು. ಅದು ಜನ ನಿಬಿಡ ಹೊಟೇಲ್ ಆಗಿದ್ದರಿಂದ ಆರೋಪಿ ಧರಿಸಿದ್ದ ಪ್ಯಾಂಟನ್ನು ಹೋಟೆಲ್ ನಲ್ಲಿ ಆಗ ಜಪ್ತು ಮಾಡಲಿಲ್ಲ.

**(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

**ದಿನಾಂಕಃ 05-09-2024 ರಂದು ಪುನಃ ಮಧ್ಯಾಹ್ನ 3.00 ಗಂಟೆಗೆ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

7. ಮೇಲಿನ ಪ್ರಕ್ರಿಯೇ ಎಲ್ಲಾ ಮಾಡುವ ವೇಳೆಗೆ ರಾತ್ರಿ ಸುಮಾರು 8.00 ರಿಂದ 8.30 ಗಂಟೆಯಾಗಿತ್ತು. ಆಗ ಆರೋಪಿ, ಪಂಚರು, ನಾನು, ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿರವರು ತನಿಖಾಧಿಕಾರಿ ಹೇಳಿದಂತೆ ಹೋಟೆಲ್ ನಿಂದ ಅಂಕೋಲಾದ ತಹಶೀಲ್ದಾರ ಕಚೇರಿ ಹತ್ತಿರ ಹೋದೆವು. ಅಲ್ಲಿ ತಲುಪಿದಾಗ ರಾತ್ರಿ ಸುಮಾರು 9.00 ಗಂಟೆ ಆಗಿತ್ತು. ಅಲ್ಲಿ

ಆರೋಪಿಯ ಮೇಲಾಧಿಕಾರಿಯನ್ನು ಲೋಕಾಯುಕ್ತ ಅಧಿಕಾರಿಯವರು ಕರೆಸಿದರು. ಆ ಮೇಲಾಧಿಕಾರಿ ಡಿ ಡಿ ಎಲ್ ಆರ್ ಆಗಿದ್ದರು. ಅವರು ಕಚೇರಿಯ ಬಾಗಿಲು ತೆಗೆದರು. ತಹಶೀಲ್ದಾರರವರ ಕಚೇರಿಗೆ ಕೆಳಗಡೆ ಇದ್ದು ಮೇಲ್ಮಹಡಿಯಲ್ಲಿ ಎ ಡಿ ಎಲ್ ಆರ್ ಕಚೇರಿ ಇತ್ತು. ಎ ಡಿ ಎಲ್ ಆರ್ ಕಚೇರಿಗೆ ಆ ರೀತಿ ಕರೆದುಕೊಂಡು ಹೋದರು. ಅಲ್ಲಿಗೆ ಹೋದ ಮೇಲೆ ಆರೋಪಿಯ ಕಚೇರಿಯ ಸಿಬ್ಬಂದಿಯಾದ ಪ್ರವೀಣ್ ಎಂಬುವವನು ಆರೋಪಿಗೆ ಬೇರೆ ಪ್ಯಾಂಟ್ ತೆಗೆದುಕೊಂಡು ಬಂದು ಕೊಟ್ಟ . ಆದ ಅದನ್ನು ಆರೋಪಿಗೆ ಕೊಟ್ಟು ಆರೋಪಿ ಧರಿಸಿದ್ದ ಪ್ಯಾಂಟನ್ನು ಲೋಕಾಯುಕ್ತ ಅಧಿಕಾರಿಯವರು ತೆಗೆಸಿ ತೆಗೆದುಕೊಂಡರು. ಆ ಪ್ಯಾಂಟನ್ನು ಒಂದು ದೊಡ್ಡ ಲಕೋಟೆಯಲ್ಲಿ ಹಾಕಿ ಸೀಲು ಹಾಕಿ ಜಪ್ತು ಮಾಡಿದರು. ಜಪ್ತು ಮಾಡಿದ ವಸ್ತುಗಳಿಗೆಲ್ಲಾ ಪಂಚರು ಮತ್ತು ಲೋಕಾಯುಕ್ತ ಅಧಿಕಾರಿ ಸಹಿ ಮಾಡಿದ ಚೀಟಿಗಳನ್ನು ಅಂಟಿಸಿದರು. ಈಗ ಸದರಿ ಪ್ಯಾಂಟ್ ಇರುವ ಮೊಹರಾದ ಲಕೋಟೆಯನ್ನು ನ್ಯಾಯಾಲಯದ ಮುಂದೆ ನೋಡಿರುತ್ತೇನೆ. ಅದನ್ನು ಮು.ಮಾ 9 ಎಂದು ಗುರುತಿಸಲಾಯಿತು. (ಅದಕ್ಕೆ ಹಾಕಿರುವ ಮೊಹರನ್ನು ಆರೋಪಿ, ಅವನ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪರಿಶೀಲಿಸಿದ್ದು, ಸದರಿ ಮೊಹರುಗಳು ಸುಸ್ಥಿತಿಯಲ್ಲಿ ಇರುತ್ತವೆ. ಅದನ್ನು ಖಾತ್ರಿ ಪಡಿಸಿಕೊಂಡು ಈಗ ಆ ಮೊಹರಾದ ಲಕೋಟೆಯನ್ನು ತೆರೆಯಲಾಗಿರುತ್ತದೆ) ಲಕೋಟೆಯಿಂದ ತೆಗೆದು ತೋರಿಸಿದ ಪ್ಯಾಂಟ್ ಈಗ ನೋಡಿರುತ್ತೇನೆ. ಅದು ಆರೋಪಿ ಧರಿಸಿದ್ದ ಮತ್ತು ಆಗ ಜಪ್ತು ಮಾಡಿದ ಪ್ಯಾಂಟ್ ಆಗಿರುತ್ತದೆ. ಆ ಪ್ಯಾಂಟನ್ನು ಮು.ಮಾ 9/1 ಎಂದು ಗುರುತಿಸಲಾಯಿತು. ಲಕೋಟೆಯನ್ನು ಮು.ಮಾ 9 ಎಂದು ಪರಿಗಣಿಸಲಾಯಿತು.

8. ನಂತರ ಲ್ಯಾಪ್ ಟಾಪ್ ನಲ್ಲಿ ನಾನು ಹಾಜರುಪಡಿಸಿದ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಧ್ವನಿ ಮುದ್ರಿತ ಆರೋಪಿ ಮತ್ತು ನನ್ನ ನಡುವಿನ ಸಂಭಾಷಣೆಯನ್ನು ಕೇಳಿಸಿದರು. ಆ ಸಂಭಾಷಣೆಯನ್ನು ಸಿಡಿಗೆ ಭರಣ ಮಾಡಿಕೊಂಡರು. ಆ ಸಿಡಿಯನ್ನು ಲಕೋಟೆಯಲ್ಲಿ ಸೀಲು ಹಾಕಿ ಜಪ್ತು ಮಾಡಿದರು. ಈಗ ನಾನು ಸದರಿ ಸಿಡಿ ಇರುವ ಮೊಹರಾದ ಲಕೋಟೆಯನ್ನು ನ್ಯಾಯಾಲಯದಲ್ಲಿ ನೋಡಿರುತ್ತೇನೆ. (ಸದರಿ ಲಕೋಟೆಗೆ ಹಾಕಿರುವ ಮೊಹರನ್ನು ಆರೋಪಿ, ಅವನ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪರಿಶೀಲಿಸಿದ್ದು, ಸದರಿ ಮೊಹರುಗಳು ಸುಸ್ಥಿತಿಯಲ್ಲಿ ಇರುತ್ತವೆ. ಅದನ್ನು ಖಾತ್ರಿ ಪಡಿಸಿಕೊಂಡು ಈಗ ಆ ಮೊಹರಾದ ಲಕೋಟೆಯನ್ನು ತೆರೆಯಲಾಗಿರುತ್ತದೆ) ಈಗ ಆ ಲಕೋಟೆಯಿಂದ ತೆಗೆದು ತೋರಿಸಿದ ಸಿಡಿ ಅದೇ ಇರುತ್ತದೆ. ಆ

ಸಿಡಿಯನ್ನು ಮು.ಮಾ –10 ಎಂದು ಗುರುತಿಸಲಾಯಿತು. ಅದರ ಲಕೋಟೆಯನ್ನು ಮು.ಮಾ 10/1 ಎಂದು ಗುರುತಿಸಲಾಯಿತು. ಸದರಿ ವಾಯ್ಸ್ ರೆಕಾರ್ಡರ್ ನಲ್ಲಿ ಇದ್ದ ಧ್ವನಿಯನ್ನು ಅಲ್ಲಿಗೆ ಬಂದಿದ್ದ ಆರೋಪಿಯ ಮೇಲಾಧಿಕಾರಿಯಾದ ಡಿ ಡಿ ಎಲ್ ಆರ್ ರವರು ಆಲಿಸಿದರು. ಆಲಿಸಿದ ನಂತರ ಅದರಲ್ಲಿರುವ ಧ್ವನಿಗಳ ಪೈಕಿ ಒಬ್ಬರ ಧ್ವನಿ ಆರೋಪಿಯದ್ದೇ ಆಗಿದೆ ಎಂದು ಲಿಖಿತವಾಗಿ ಬರೆದುಕೊಟ್ಟರು. ನಂತರ ಲೋಕಾಯುಕ್ತ ಅಧಿಕಾರಿಯವರು ಆರೋಪಿಗೆ ಲಂಚದ ಹಣದ ಬಗ್ಗೆ ವಿವರಣೆಯನ್ನು ಕೇಳಿದರು. ಅವರು ಲಿಖಿತವಾಗಿ ವಿವರಣೆ ನೀಡಿದರು. ನಾನು ಡಿ ಡಿ ಎಲ್ ಆರ್ ರವರು ನೀಡಿದ ಲಿಖಿತ ಹೇಳಿಕೆ ಮತ್ತು ಆರೋಪಿ ನೀಡಿದ ಲಿಖಿತ ವಿವರಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಆರೋಪಿ ಬರೆದುಕೊಟ್ಟ ಲಿಖಿತ ವಿವರಣೆ ನೋಡಿರುತ್ತೇನೆ. ಅದನ್ನು ನಿಪಿ–24 ಎಂದು ಗುರುತಿಸಲಾಯಿತು. ಈಗ ಡಿ ಡಿ ಎಲ್ ಆರ್ ರವರು ನೀಡಿದ ಲಿಖಿತ ಹೇಳಿಕೆಯನ್ನು ನೋಡಿರುತ್ತೇನೆ. ಅದನ್ನು ನಿಪಿ–25 ಎಂದು ಗುರುತಿಸಲಾಯಿತು. ನಂತರ ನನ್ನ ಅರ್ಜಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಆರೋಪಿಯ ಕಚೇರಿಯಿಂದ ಲೋಕಾಯುಕ್ತ ಅಧಿಕಾರಿ ಪಡೆದರು. ಅದರ ನೆರಳಚ್ಚು ಪ್ರತಿ ಮಾಡಿಸಿ ಅದನ್ನು ಡಿ ಡಿ ಎಲ್ ಆರ್ ರವರಿಂದ ದೃಢೀಕರಣೆ ಮಾಡಿಸಿಕೊಂಡು ಜಪ್ತು ಮಾಡಿದರು. ಮೂಲ ಕಡತವನ್ನು ವಾಪಸ್ಸು ಅವರಿಗೆ ನೀಡಿದರು. ನೆರಳಚ್ಚು ಪ್ರತಿ ಮಾಡುವುದಕ್ಕೆ ಮೊದಲು ಮೂಲ ದಾಖಲಾತಿ ಮೇಲೆ ಪಂಚರು ಮತ್ತು ಲೋಕಾಯುಕ್ತ ಅಧಿಕಾರಿ ರುಜು ಮಾಡಿದರು. ನಾನು ಆ ದಾಖಲಾತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಆ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ನೋಡಿರುತ್ತೇನೆ. ಅವುಗಳನ್ನು ಒಟ್ಟಾರೆಯಾಗಿ ನಿಪಿ–26 ಎಂದು ಗುರುತಿಸಲಾಯಿತು. (ಸದರಿ ದಾಖಲಾತಿಗಳು ಪುಟ ಸಂಖ್ಯೆ 106 ರಿಂದ 143 ರಂತೆ ಇದೆ). ನಾನು ಪೋಡಿಗಾಗಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದೆ. ಟ್ರ್ಯಾಪ್ ಪಂಚನಾಮೆ ಕಾಲದಲ್ಲಿ ನನ್ನ ಹಾಗೂ ಆರೋಪಿಯ ಮಾದರಿ ಧ್ವನಿಯನ್ನು ಲೋಕಾಯುಕ್ತ ಅಧಿಕಾರಿಯವರು ಸಂಗ್ರಹಿಸಿದರು. ವಾಯ್ಸ್ ರೆಕಾರ್ಡರ್ ನಲ್ಲಿ ಅದನ್ನು ಧ್ವನಿ ಮುದ್ರಣ ಮಾಡಿಕೊಂಡರು. ಅದನ್ನು ಸಿಡಿ ಮಾಡಿ ಲಕೋಟೆಯಲ್ಲಿ ಹಾಕಿ ಸೀಲು ಮಾಡಿ ಜಪ್ತು ಮಾಡಿದರು. ಆ ಸಿಡಿಗಳನ್ನು ನೋಡಿದರೆ ಗುರತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಎರಡು ಮೊಹರಾದ ಲಕೋಟೆಗಳನ್ನು ತೋರಿಸಿದ್ದು ಅವುಗಳು ಆರೋಪಿಯ ಮಾದರಿ ಧ್ವನಿ ಮತ್ತು ನನ್ನ ಮಾದರಿ ಧ್ವನಿ ಸಂಗ್ರಹಿಸಿರುವ ಸಿಡಿಗಳು ಇರುವ ಲಕೋಟೆಗಳು ಆಗಿವೆ. (ಸದರಿ ಲಕೋಟೆಗಳಿಗೆ ಹಾಕಿರುವ ಮೊಹರನ್ನು ಆರೋಪಿ, ಅವನ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪರಿಶೀಲಿಸಿದ್ದು, ಸದರಿ ಮೊಹರುಗಳು

ಸುಸ್ಥಿತಿಯಲ್ಲಿ ಇರುತ್ತವೆ. ಅದನ್ನು ಖಾತ್ರಿ ಪಡಿಸಿಕೊಂಡು ಈಗ ಆ ಮೊಹರಾದ ಲಕೋಟೆಗಳ ತೆರೆಯಲಾಗಿರುತ್ತದೆ) ಈಗ ಆರೋಪಿಯ ಮಾದರಿ ಧ್ವನಿ ಇರುವ ಸಿಡಿಯನ್ನು ಲಕೋಟೆಯಿಂದ ತೆಗೆದು ತೋರಿಸಿದ್ದು ಅದನ್ನು ಗುರುತಿಸಿರುತ್ತೇನೆ. ಸದರಿ ಸಿಡಿಯನ್ನು ಮು.ಮಾ 11 ಎಂದು ಗುರುತಿಸಲಾಯಿತು. ಅದರ ಲಕೋಟೆಯನ್ನು ಮು.ಮಾ 11/1 ಎಂದು ಗುರುತಿಸಲಾಯಿತು. ಈಗ ನನ್ನ ಮಾದರಿ ಧ್ವನಿ ಇರುವ ಸಿಡಿಯನ್ನು ಲಕೋಟೆಯಿಂದ ತೆಗೆದು ತೋರಿಸಿದ್ದು ಅದನ್ನು ಗುರುತಿಸಿರುತ್ತೇನೆ. ಸದರಿ ಸಿಡಿಯನ್ನು ಮು.ಮಾ 12 ಎಂದು ಗುರುತಿಸಲಾಯಿತು. ಅದರ ಲಕೋಟೆಯನ್ನು ಮು.ಮಾ 12/1 ಎಂದು ಗುರುತಿಸಲಾಯಿತು. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಪ್ರಮುಖ ಘಟನಾವಳಿಗಳ ಛಾಯಾಚಿತ್ರಗಳನ್ನು ತೆಗೆಸಿದರು. ಈಗ ಅವುಗಳನ್ನು ನೋಡಿರುತ್ತೇನೆ. ಅವುಗಳನ್ನು ನಿಪಿ–27 ರಿಂದ 34 ಎಂದು ಗುರುತಿಸಲಾಯಿತು. ನಿಪಿ–29 ಛಾಯಾಚಿತ್ರದಲ್ಲಿ ಆರೋಪಿಯ ಎಡಗೈಯನ್ನು ದ್ರಾವಣದಲ್ಲಿ ತೊಳೆದುಕೊಳ್ಳುವುದು ಕಾಣುತ್ತದೆ. ನಿಪಿ–30 ಛಾಯಾಚಿತ್ರದಲ್ಲಿ ಆರೋಪಿಯ ಬಲಗೈಯನ್ನು ದ್ರಾವಣದಲ್ಲಿ ತೊಳೆದುಕೊಳ್ಳುವುದು ಕಾಣುತ್ತದೆ. ನಿಪಿ–31 ಛಾಯಾಚಿತ್ರದಲ್ಲಿ ಕೈತೊಳೆದ ಮೇಲೆ ದ್ರಾವಣವನ್ನು ಬಾಟಲಿಯಲ್ಲಿ ಸಂಗ್ರಹಿಸುತ್ತಿರುವುದು ಕಾಣುತ್ತದೆ. ನಿಪಿ–32 ಛಾಯಾಚಿತ್ರದಲ್ಲಿ ಆರೋಪಿಯು ನನ್ನಿಂದ ಪಡೆದ ಲಂಚದ ಹಣವನ್ನು ಪಂಚರ ಕೈಯಲ್ಲಿ ಕೊಡುತ್ತಿರುವುದು ಕಾಣುತ್ತದೆ. ನಿಪಿ–33 ಛಾಯಾಚಿತ್ರದಲ್ಲಿ ಡಿ ಡಿ ಎಲ್ ಆರ್ ರವರು ವಾಯ್ಸ್ ರೆಕಾರ್ಡರ್ ನಲ್ಲಿ ನಾನು ಟ್ರ್ಯಾಪ್ ಕಾಲದಲ್ಲಿ ರೆಕಾರ್ಡ ಮಾಡಿಕೊಂಡಿದ್ದ ಸಂಭಾಷಣೆಯನ್ನು ಇಯರ್ ಫೋನ್ ಮೂಲಕ ಆಲಿಸುತ್ತಿರುವುದು ಕಾಣುತ್ತದೆ. ನಿಪಿ–34 ಛಾಯಾಚಿತ್ರದಲ್ಲಿ ಆರೋಪಿಯ ಪ್ಯಾಂಟ್ ಅನ್ನು ಮೇಜಿನ ಮೇಲೆ ಹಾಜರುಪಡಿಸುತ್ತಿರುವುದು ಕಾಣುತ್ತದೆ. ಆ ಪ್ಯಾಂಟಿನಲ್ಲಿ ಆರೋಪಿ ನನ್ನಿಂದ ಪಡೆದ ಲಂಚದ ಹಣವನ್ನು ಕಿಸೆಯಲ್ಲಿ ಇಟ್ಟುಕೊಂಡಿದ್ದ. ಈ ಎಲ್ಲಾ ಸಂಗತಿಗಳನ್ನು ಆಗ ಟ್ರ್ಯಾಪ್ ಪಂಚನಾಮೆ ಮಾಡಿ ಅದರಲ್ಲಿ ನಮೂದಿಸಿರುತ್ತಾರೆ. ಟ್ರ್ಯಾಪ್ ಕಾಲದಲ್ಲಿ ಧ್ವನಿ ಮುದ್ರಣ ಮಾಡಿಕೊಂಡಿದ್ದ ನನ್ನ ಮತ್ತು ಆರೋಪಿಯ ನಡುವೆ ಸಂಭಾಷಣೆಯನ್ನು ಯಥಾವತ್ತಾಗಿ ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿರುತ್ತಾರೆ. ಈಗ ಆ ಪಂಚನಾಮೆ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಅದಕ್ಕೆ ಪಂಚರು ಗಣಕೀರಣ ಮಾಡಿದ ಸಿಬ್ಬಂದಿ, ಲೋಕಾಯುಕ್ತ ಅಧಿಕಾರಿ ಮತ್ತು ಇತರೆ ಸಿಬ್ಬಂದಿ ರುಜು ಮಾಡಿದ್ದಾರೆ. ಅದರಲ್ಲಿ ಆರೋಪಿಯ ರುಜು ಸಹ ಪಡೆದಿದ್ದಾರೆ. ಈಗ ಆರೋಪಿಯ ರುಜುವನ್ನು ಸಹ ಗುರುತಿಸುತ್ತೇನೆ. ಟ್ರ್ಯಾಪ್ ಪಂಚನಾಮೆಯನ್ನು ನಿಪಿ–35 ಎಂದು

ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿಪಿ–35(ಎ)ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಆರೋಪಿಯ ರುಜುವನ್ನು ನಿಪಿ–35(ಬಿ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಮತ್ತು ಆರೋಪಿಯ ಕಚೇರಿಯ ನಕ್ಷೆಗಳನ್ನು ಆಗ ತಯಾರಿಸಿರುತ್ತಾರೆ. ಈಗ ನಾನು ಆ ನಕ್ಷೆಗಳನ್ನು ನೋಡಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–36 ಮತ್ತು 37 ಎಂದು ಗುರುತಿಸಲಾಯಿತು. ಆರೋಪಿ ಕಚೇರಿಯಲ್ಲಿ ಪಂಚನಾಮೆ ಪ್ರಕ್ರಿಯೆ ಮುಗಿದಾಗ ಸುಮಾರು ರಾತ್ರಿ 3–4 ಗಂಟೆ ಆಗಿತ್ತು. ಅಂದರೆ ಅದು ಮುಂಜಾವು ಆಗಿತ್ತು. ನಂತರ ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ಜೀಪ್ ನಲ್ಲಿ ಲೋಕಾಯುಕ್ತ ಅಧಿಕಾರಿಗಳು ಅವರ ಕಚೇರಿಗೆ ಕರೆದುಕೊಂಡು ಹೋದರು, ನಾನು ಅಂಕೋಲಾದಲ್ಲಿಯೇ ಉಳಿದುಕೊಂಡೆ. ನನ್ನ ಮಾದರಿ ಧ್ವನಿ ಸಂಗ್ರಹ ಮಾಡುವಾಗ ನನಗೆ ಲೋಕಾಯುಕ್ತ ಅಧಿಕಾರಿಯವರು ಓದಲು ಕೆಲವು ವಾಕ್ಯಗಳನ್ನು ಬರೆದುಕೊಟ್ಟಿದ್ದರು, ನಾನು ಅದನ್ನು ಓದಿದೆ. ಆರೋಪಿಗೆ ಸಹ ಅವನ ಮಾದರಿ ಧ್ವನಿ ಸಂಗ್ರಹ ಮಾಡುವಾಗ ಕೆಲವು ವಾಕ್ಯಗಳನ್ನು ಬರೆದುಕೊಟ್ಟು ಅವನಿಂದ ಓದಿಸಿದರು. ಅದನ್ನು ಧ್ವನಿ ಮುದ್ರಣ ಮಾಡಿಕೊಂಡರು. ನಾನು ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ಹಾಜರುಪಡಿಸಿದ ಮತ್ತು ಆರೋಪಿ ಅದನ್ನು ಟ್ರ್ಯಾಪ್ ಕಾಲದಲ್ಲಿ ಸ್ವೀಕರಿಸಿದ ಮೇಲೆ ಅವನಿಂದ ಜಪ್ತು ಮಾಡಿದ ಹಣವನ್ನು ನೋಡಿದರೆ ಗುರುತಿಸುತ್ತೇನೆ. (ಈಗ ಹಣ ಇರುವ ವಸ್ತು ಸಂಖ್ಯೆ 10 ಲಕೋಟೆಗೆ ಹಾಕಿರುವ ಮೊಹರನ್ನು ಆರೋಪಿ, ಅವನ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪರಿಶೀಲಿಸಿದ್ದು, ಸದರಿ ಮೊಹರು ಸುಸ್ಥಿತಿಯಲ್ಲಿ ಇರುತ್ತವೆ. ಅದನ್ನು ಖಾತ್ರಿ ಪಡಿಸಿಕೊಂಡು ಈಗ ಆ ಮೊಹರಾದ ಲಕೋಟೆಯನ್ನು ತೆರೆಯಲಾಗಿರುತ್ತದೆ) ಈಗ ಮೊಹರಾದ ಲಕೋಟೆಯಿಂದ ತೆಗೆದು ತೋರಿಸಿದ ರೂ.500/– ರ 30 ನೋಟುಗಳು ಇದ್ದು, ಅದು ಮೇಲೆ ಹೇಳಿರುವ ನಾನು ಹಾಜರುಪಡಿಸಿದ ಮತ್ತು ಆರೋಪಿ ಅದನ್ನು ಸ್ವೀಕರಿಸಿದ್ದು ಟ್ರ್ಯಾಪ್ ಕಾಲದಲ್ಲಿ ಜಪ್ತು ಮಾಡಿದ ರೂ.15000/– ಆಗಿರುತ್ತದೆ. ಅದನ್ನು ಒಟ್ಟಾರೆಯಾಗಿ ಮು.ಮಾ 13 ಎಂದು ಗುರುತಿಸಲಾಯಿತು. ಅದರ ಲಕೋಟೆಯನ್ನು ಮು.ಮಾ 13/1 ಎಂದು ಗುರುತಿಸಲಾಯಿತು.

9. ಟ್ರ್ಯಾಪ್ ಕಾಲದಲ್ಲಿ ಆರೋಪಿ ಮತ್ತು ನನ್ನ ನಡುವೆ ಆಗಿರುವ ಸಂಭಾಷಣೆಯನ್ನು, ನನ್ನ ಮಾದರಿ ಧ್ವನಿ ಮುದ್ರಣ ಮತ್ತು ಆರೋಪಿಯ ಮಾದರಿ ಧ್ವನಿ ಮುದ್ರಣವನ್ನು ಕೇಳಿಸಿದರೆ ನಾನು

ಗುರುತಿಸುತ್ತೇನೆ. (ಈಗ ವಸ್ತು ಸಂಖ್ಯೆ 12/ಮು.ಮಾ 10 ಲಕೋಟೆಗೆ ಹಾಕಿರುವ ಮೊಹರನ್ನು ಆರೋಪಿ, ಅವನ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪರಿಶೀಲಿಸಿದ್ದು, ಸದರಿ ಮೊಹರು ಸುಸ್ಥಿತಿಯಲ್ಲಿ ಇರುತ್ತವೆ. ಅದನ್ನು ಖಾತ್ರಿ ಪಡಿಸಿಕೊಂಡು ಈಗ ಆ ಮೊಹರಾದ ಲಕೋಟೆಯನ್ನು ತೆರೆಯಲಾಗಿರುತ್ತದೆ ಮತ್ತು ಅದರಲ್ಲಿರುವ ಸಿಡಿಯನ್ನು ಹೊರತೆರೆಯಲಾಗಿರುತ್ತದೆ.) ಈಗ ನನಗೆ ಸದರಿ ಸಿಡಿಯಲ್ಲಿರುವ 12.10 ನಿಮಿಷದಿಂದ 28.25 ನಿಮಿಷದವರೆಗಿನ ಸಂಭಾಷಣೆ ಕೇಳಿಸಿದ್ದು ಅದು ಹೋಟೆಲ್ ನಲ್ಲಿ ಟ್ರ್ಯಾಪ್ ಕಾಲದಲ್ಲಿ ಆರೋಪಿ ಮತ್ತು ನನ್ನ ನಡುವೆ ಆಗಿರುವ ಸಂಭಾಷಣೆಯಾಗಿರುತ್ತದೆ. ಆ ಸಮಯದಲ್ಲಿ ಹೊಟೇಲ್ ನಲ್ಲಿ ಆ್ಯಂಗಲ್ ಹಾಕಿಸುವ ಮತ್ತು ಬಾಗಿಲಿನ ಕೆಲಸ ಮಾಡಿಸುತ್ತಿದ್ದರು. ಅದರ ಶಬ್ದ ಹಿನ್ನಲೆಯಲ್ಲಿ ಕೇಳಿಸುತ್ತದೆ. ಸದರಿ ಸಂಭಾಷಣೆಯನ್ನು ಟ್ರ್ಯಾಪ್ ಪಂಚನಾಮೆಯಲ್ಲಿ ಬರೆದಿದ್ದಾರೆ. ಆ ಸಮಯದಲ್ಲಿ ಲಂಚದ ಹಣ ರೂ.15000/- ಪಡೆದು ಬಾಕಿ ಹಣವನ್ನು 2-3 ದಿನಗಳಲ್ಲಿ ಕೊಡುವಂತೆ ಆರೋಪಿ ಕೇಳಿರುವುದು ಸಂಭಾಷಣೆಯಲ್ಲಿರುತ್ತದೆ. ಈಗ ಮು.ಮಾಲು 12 ಸಿಡಿಯನ್ನು ನ್ಯಾಯಾಲಯದ ಲ್ಯಾಪ್ ಟಾಪ್ ಮತ್ತು ವಿಸಿ ಮಾನಿಟರ್ ಮೂಲಕ ಚಾಲು ಮಾಡಿ ಕೇಳಿಸಿದ್ದು, ಅದರಲ್ಲಿ ನನ್ನ ಮಾದರಿ ಧ್ವನಿ ಇರುತ್ತದೆ. (ಈಗ ಮು.ಮಾ 12 ಲಕೋಟೆಗೆ ಹಾಕಿರುವ ಮೊಹರನ್ನು ಆರೋಪಿ, ಅವನ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪರಿಶೀಲಿಸಿದ್ದು, ಸದರಿ ಮೊಹರು ಸುಸ್ಥಿತಿಯಲ್ಲಿ ಇರುತ್ತವೆ. ಅದನ್ನು ಖಾತ್ರಿ ಪಡಿಸಿಕೊಂಡು ಈಗ ಆ ಮೊಹರಾದ ಲಕೋಟೆಯನ್ನು ತೆರೆಯಲಾಗಿರುತ್ತದೆ ಮತ್ತು ಅದರಲ್ಲಿರುವ ಸಿಡಿಯನ್ನು ಹೊರತೆರೆಯಲಾಗಿರುತ್ತದೆ.) ಈಗ ಮು.ಮಾಲು 11 ಸಿಡಿಯನ್ನು ನ್ಯಾಯಾಲಯದ ಲ್ಯಾಪ್ ಟಾಪ್ ಮತ್ತು ವಿಸಿ ಮಾನಿಟರ್ ಮೂಲಕ ಚಾಲು ಮಾಡಿ ಕೇಳಿಸಿದ್ದು, ಅದರಲ್ಲಿ ಆರೋಪಿಯ ಮಾದರಿ ಧ್ವನಿ ಇರುತ್ತದೆ. (ಈಗ ಮು.ಮಾ 11 ಲಕೋಟೆಗೆ ಹಾಕಿರುವ ಮೊಹರನ್ನು ಆರೋಪಿ, ಅವನ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಪರಿಶೀಲಿಸಿದ್ದು, ಸದರಿ ಮೊಹರು ಸುಸ್ಥಿತಿಯಲ್ಲಿ ಇರುತ್ತವೆ. ಅದನ್ನು ಖಾತ್ರಿ ಪಡಿಸಿಕೊಂಡು ಈಗ ಆ ಮೊಹರಾದ ಲಕೋಟೆಯನ್ನು ತೆರೆಯಲಾಗಿರುತ್ತದೆ ಮತ್ತು ಅದರಲ್ಲಿರುವ ಸಿಡಿಯನ್ನು ಹೊರತೆರೆಯಲಾಗಿರುತ್ತದೆ).

**ಪಾಟಿ ಸವಾಲುಃ** ಎಫ್ ಎಸ್ ಪಿ ವಕೀಲರು ಆರೋಪಿ ಪರ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದಾರೆ, ಸಾಕ್ಷಿಗೆ ರೂ.500/- ಭತ್ಯೆ ಪಾವತಿ ಮಾಡಿದ್ದಾರೆ. ಪಾಟಿ ಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ